P and SC. 2/2021
PW-2

Date : 14/12/2022

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಶ್ರೀ ಜಿ.ಎಂ.ಜಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರರ ಪರ ಸಾಕ್ಷಿದಾರನಾಗಿರುತ್ತೇನೆ. ನನ್ನ ಮುಖ್ಯ ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ .

ಈ ಅರ್ಜಿಯ ಅರ್ಜಿದಾರರಾದ ಅಶ್ವಥ್ ರವರಿಗೆ ತಿರುಮಲಭೋವಿ ಎನ್ನುವವರು ಮರಣ ಶಾಸನ ಪತ್ರವನ್ನು ಬರೆಯಿಸಲು ಮಾಹಿತಿಗಳನ್ನು ನೀಡಿದ ಪ್ರಕಾರ ನಾನು ಮರಣ ಶಾಸನ ಪತ್ರವನ್ನು ತಯಾರಿಸಿ ಕೊಟ್ಟಿರುತ್ತೇನೆ . ನಂತರದಲ್ಲಿ ಮರಣ ಶಾಸನ ಪತ್ರವನ್ನು ನೋಂದು ಮಾಡಿಸಿಕೊಂಡಿದ್ದಾರೆ ಅಂತ ಗೊತ್ತಾಗಿರುತ್ತದೆ . ಈಗ ನಾನು ನಿಪಿ–3 ರ ಮರಣ ಶಾಸನ ಪತ್ರದಲ್ಲಿ ನನ್ನ ಸಹಿಯನ್ನು ನೋಡುತ್ತಿದ್ದು, ಅದನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ನಾನು ದಸ್ತಾವೇಜು ಬರಹಗಾರನಾಗಿದ್ದು, ಆ ಬಗ್ಗೆ ಪರವಾನಗಿಯನ್ನು ಹಾಜರುಪಡಿಸುತ್ತೇನೆ.

**ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

ದಿನಾಂಕ 13/09/2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಶ್ರೀ ಜಿ.ಎಂ.ಜಿ. ವಕೀಲರಿಂದ –**

ನನ್ನ ಮುಖ್ಯ ಸಾಕ್ಷ್ಯಕ್ಕೆ ಪೂರಕವಾಗಿ ನಾನು ಈ ದಿನ ನನ್ನ ಮೂಲ ಆಧಾರ್ ಕಾರ್ಡ್ ಮತ್ತು ದಸ್ತಾವೇಜು ಬರಹಗಾರರ ಅನುಮತಿ ಪತ್ರವನ್ನು ಹಾಗೂ ಅವುಗಳ ದೃಢೀಕೃತ ನಿಜ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ . ಸದರ್ ದಾಖಲಾತಿಗಳನ್ನು ಪರಿಶೀಲಿಸಿ ತಾಳೆ ಹೊಂದುವುದರಿಂದ ದೃಢೀಕೃತ ನಿಜ ಪ್ರತಿ ಆಧಾರ್ ಕಾರ್ಡ್ ಮತ್ತು ಬರಹಗಾರರ ಅನುಮತಿ ಪತ್ರವನ್ನು ನಿಪಿ–6 ಮತ್ತು 7 ಎಂದು ಗುರುತಿಸಲಾಯಿತು ಮತ್ತು ಮೂಲ ಆಧಾರ್ ಕಾರ್ಡ್ ಮತ್ತು ಬರಹಗಾರರ ಅನುಮತಿ ಪತ್ರವನ್ನು ವಾಪಾಸು ನೀಡಲಾಗಿರುತ್ತದೆ

**ಎದುರುದಾರರು ಯಾರು ಇಲ್ಲ. ಪಾಟೀ ಸವಾಲು ಏನೂ ಇಲ್ಲ.**

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.